**C**

SL. No. : U

ಒಟ್ಟು ಪ್ರಶ್ನೆಗಳ ಸಂಖ್ಯೆ : 58 ]

Total No. of Questions : 58 ]

**ಸಂಕೇತ ಸಂಖ್ಯೆ : 62-K**

**CCE PR**
**REVISED**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

[ Total No. of Printed Pages : 8

**Code No. : 62-K**

# ವಿಷಯ : ತೃತೀಯ ಭಾಷೆ — ಕನ್ನಡ

# Subject : Third Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

ದಿನಾಂಕ : 28. 06. 2019 ] [ Date : 28. 06. 2019

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-15 ರವರೆಗೆ ] [ Time : 9-30 A.M. to 12-15 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 58 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

## ವಿಭಾಗ – 'ಎ'

### (ಗದ್ಯ, ಪದ್ಯ, ಪೂರಕ ಅಧ್ಯಯನ)

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** 16 × 1 = 16

1. ಮಿನಿ ಪೊಲೀಸ್ ನಗರದಲ್ಲಿ ದಾರಿತಪ್ಪಿದ ಗೊರೂರರಿಗೆ ರಾತ್ರಿ ಆಶ್ರಯ ನೀಡಿದವರು ಯಾರು ?
2. ಶರೀಫರು ಯಾವ ಮಾತನ್ನು ಹುಸಿಗೊಳಿಸಿದರು ?
3. ಶರೀಫರ ಮೇಲಿನ ಪೂಜ್ಯ ಭಾವನೆಯಿಂದ ದವಸ ಧಾನ್ಯಗಳನ್ನು ನೀಡುತ್ತಿದ್ದವರು ಯಾರು ?
4. ರಾಮಸಿಂಗನು ಯಾವ ಚಳವಳಿಯ ಮುಂದಾಳತ್ವ ವಹಿಸಿದ್ದನು ?
5. ಗಾಂಧೀಜಿಯವರು ಕೊಟ್ಟ ಮಂತ್ರ ಯಾವುದು ?
6. ದೇಸಾಯಿ ಈಶಪ್ರಭು ಕಿಡಿಕಿಡಿಯಾದುದೇಕೆ ?
7. ಕಿತ್ತೂರು ಚೆನ್ನಮ್ಮ ಸೆರೆಯಲ್ಲಿದ್ದಾಗ ಸಂಧಿಸಲು ಬಂದ ವೀರ ಯಾರು ?
8. ಸತೀಶ ಕುಲಕರ್ಣಿಯವರು ಕಟ್ಟ ಬಯಸಿರುವ ನಾಡು ಎಲ್ಲರೂ ಮೆಚ್ಚುವಂಥದ್ದು ಏಕೆ ?
9. 'ಭೂಮಿತಾಯ ಕುಡಿಗಳು' ಪದ್ಯದಲ್ಲಿ ಕವಿ ಯಾರು ಯಾರು ಒಂದು ಎಂದು ಹೇಳಿದ್ದಾರೆ ?
10. ಕಳಸ, ಶಿಲುಬೆ, ಬಿಳಿ ಮಿನಾರು ಇವು ಯಾವ ಧರ್ಮದ ಸಂಕೇತಗಳಾಗಿವೆ ?
11. ಬಸವಣ್ಣನವರ ಪ್ರಕಾರ ದೇವಲೋಕ ಯಾವುದು ?
12. ಸ್ವರ್ಗ–ನರಕಗಳ ಬಗೆಗೆ ಬಸವಣ್ಣನವರು ಕೊಟ್ಟಂತಹ ಹೊಸ ಸೂತ್ರ ಯಾವುದು ?
13. ಪುಲಿಗೆರೆ ಸೋಮನಾಥ ಹೇಳಿರುವಂತೆ ಋಷಿಯಲ್ಲಿ ಯಾವ ಗುಣವಿರಬೇಕು ?
14. ರಾಜನಾಗಲು ಯಾವ ಗುಣಗಳನ್ನು ಹೊಂದಿರಬೇಕೆಂದು ಸೋಮೇಶ್ವರ ಶತಕದಲ್ಲಿ ತಿಳಿಸಲಾಗಿದೆ ?
15. ಧರ್ಮಪದನು ವಿಶುವಿನ ಬಳಿಗೆ ಏಕೆ ಬಂದನು ?
16. ವಿಶುವಿನ ಎದೆಯಲ್ಲಿ ಎಂದೆಂದಿಗೂ ನಿಲ್ಲದಂತೆ ಮೊಳಗುತ್ತಿದ್ದ ಪದ ಯಾವುವು ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 14 × 2 = 28

17. ಕೊಡಗಿನ ಗೌರಮ್ಮನವರ ಬರವಣಿಗೆಗೆ ಪೂರಕವಾದ ವಿಚಾರಗಳು ಯಾವುವು ?
18. ಕೊಡಗಿನ ಗೌರಮ್ಮನವರು ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ಹೇಗೆ ತೊಡಗಿಸಿಕೊಂಡರು ?
19. ಗಾಂಧೀಜಿಯವರು ಅವಾಕ್ಕಾಗಲು ಕಾರಣವೇನು ?
20. ಗುರು ಗೋವಿಂದಭಟ್ಟರ ಗುಣಸ್ವಭಾವವನ್ನು ತಿಳಿಸಿರಿ.
21. ಶರೀಫರ ಬಾಲ್ಯವು ಹಿಂದೂ ಪರಂಪರೆಯೊಂದಿಗೆ ಹೇಗೆ ಬೆರೆತುಹೋಗಿತ್ತು ?
22. ಕೆಳದಿ ಚೆನ್ನಮ್ಮನು ತನ್ನ ರಾಜಧಾನಿಯನ್ನು ಭುವನಗಿರಿಗೆ ಏಕೆ ಸ್ಥಳಾಂತರಿಸಿದಳು ?
23. ಪೋರ್ಚುಗೀಸರು ಭಾರತೀಯರನ್ನು ಯಾವ ರೀತಿಯಲ್ಲಿ ಆರ್ಥಿಕವಾಗಿ ಶೋಷಣೆ ಮಾಡುತ್ತಿದ್ದರು ?

24. 'ಕಟ್ಟತೇವ ನಾವು' ಕವಿತೆಯಲ್ಲಿ ಕವಿ ಯಾವೆಲ್ಲ ಮನಸ್ಸುಗಳನ್ನು ಕಟ್ಟಿ ವೈಮನಸ್ಸನ್ನು ತೊಡೆದು ಹಾಕುತ್ತೇವೆ ಎಂದು ಹೇಳುತ್ತಾರೆ ?

25. ಗ್ರಂಥಾಲಯವನ್ನು ಹೊಕ್ಕೊಡನೆಯೇ ಕವಿಗೆ ಆದ ಅನುಭವವೇನು ?

26. ಸಿ.ಪಿ.ಕೆ.ಯವರು 'ಹಿರಿಬಾಳುಗಳ ಪಳೆಯುಳಿಕೆ' ಎಂದು ಯಾವುದನ್ನು ಕರೆದಿದ್ದಾರೆ ? ಏಕೆ ?

27. 'ಗ್ರಂಥಾಲಯ' ಕವನದಲ್ಲಿ ಪಾರ್ಥನಿಗೆ ಕವಿ ತಮ್ಮನ್ನು ಹೋಲಿಸಿಕೊಂಡಿರುವುದು ಮೆಚ್ಚುವಂಥದ್ದು ಏಕೆ ?

28. ಮಳೆಗಾಲದ ಮೋಡಗಳನ್ನು ನೋಡಿದಾಗ ರೈತನಿಗೆ ಉಂಟಾಗುವ ಭಾವನೆಗಳೇನು ?

29. ಸ್ವಾತಿ ಮಳೆ ಸುರಿದಾಗ ರೈತನಿಗಾಗುವ ಲಾಭಗಳೇನೆಂದು ಜನಪದಗೀತೆಯಲ್ಲಿ ಹೇಳಿದೆ ?

30. ಈರಪ್ಪ ಎಂ. ಕಂಬಳಿಯವರ ಬಿಳಿಯ ಶರ್ಟು ಕೆಂಪು ಬಣ್ಣಕ್ಕೆ ತಿರುಗಿದ್ದೇಕೆ ?

**ಈ ಕೆಳಗಿನ ಹೇಳಿಕೆಗಳ ಸಂದರ್ಭವನ್ನು ಸ್ವಾರಸ್ಯದೊಂದಿಗೆ ವಿವರಿಸಿ :** 4 × 3 = 12

31. "ನನ್ನ ಖೈದಿಯ ರಕ್ಷಣೆಯನ್ನು ನಾನು ಸರಿಯಾಗಿ ಮಾಡಬೇಕಷ್ಟೆ."

32. "ದೇಹದಲ್ಲಿ ಪ್ರಾಣವಿರುವವರೆಗೆ ಇದನ್ನು ಕೆಳಗಿಡಲಾರೆ"

33. "ತನ್ನ ಬಣ್ಣಿಸಬೇಡ"

34. "ನಾನು ಎಂಬುದು ಬಿಟ್ಟು ಜ್ಞಾನಿಗಳೊಡನಾಡಿ"

35. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 × 3 = 3

ಜಾತಿ ......................................................

...................................................... ಇಲ್ಲದ

..........................................................

ಕುಲವೆನ್ನದ ..............................................

..........................................................

................................................ ಕಟ್ಟುತೇವ.

**ಅಥವಾ**

ಕ್ರಾಂತಿ ....................................................

....................................................... ನಾವು

..........................................................

ರಕ್ತಗಾಲಿನ ...............................................

............................................. ಬರೆಯತೇವ.

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** 2 × 3 = 6

36. ಗೊರೂರು ರಾಮಸ್ವಾಮಿ ಅಯ್ಯಂಗಾರ್

37. ಕೆ.ಎಸ್. ನಿಸಾರ್ ಅಹಮದ್

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 2 × 4 = 8

38. ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ' ಬೀಚಿಯವರಿಗೆ ಮೆಚ್ಚುಗೆಯಾಗಲು ಕಾರಣವೇನು ?

***ಅಥವಾ***

ಶಂ.ಬಾ. ಜೋಶಿಯವರ 'ಯಕ್ಷಪ್ರಶ್ನೆ' ಕೃತಿಯು ಬೀಚಿಯವರ ಮನಸ್ಸನ್ನು ಸೂರೆಗೊಂಡಿತು ಏಕೆ ?

39. ಪುರಂದರದಾಸರ ಕೀರ್ತನೆಯಲ್ಲಿ ಡಂಭಾಚಾರದ ಭಕ್ತಿಯ ಸ್ಪಷ್ಟ ಚಿತ್ರಣವು ಹೇಗೆ ಚಿತ್ರಿತವಾಗಿದೆ ? ವಿವರಿಸಿರಿ.

***ಅಥವಾ***

ಡಾಂಭಿಕ ಭಕ್ತನು ಪರಮವೈರಾಗ್ಯಶಾಲಿ ಎನಿಸಲು ಬೂಟಕತನದಿಂದ ಪೂಜೆ ಮಾಡುವುದನ್ನು ಪುರಂದರದಾಸರು ಹೇಗೆ ವರ್ಣಿಸಿದ್ದಾರೆ ?

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** 12 × 1 = 12

40. ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ

(ಎ) ಒಂಬತ್ತು (ಬಿ) ಇಪ್ಪತ್ತೈದು

(ಸಿ) ಐದು (ಡಿ) ಎರಡು

41. 'ಪರ್ವತ' ಪದವು ನಾಮಪದದ ಈ ಪ್ರಕಾರಕ್ಕೆ ಸೇರಿದೆ

(ಎ) ಅಂಕಿತನಾಮ (ಬಿ) ಅನ್ವರ್ಥಕನಾಮ

(ಸಿ) ಭಾವನಾಮ (ಡಿ) ರೂಢನಾಮ

42. ಅಬ್ಬ ಈ ವನ ಎಷ್ಟು ಸುಂದರವಾಗಿದೆ. ಈ ವಾಕ್ಯದಲ್ಲಿರಬೇಕಾದ ಲೇಖನ ಚಿಹ್ನೆ

(ಎ) ಪೂರ್ಣವಿರಾಮ (ಬಿ) ಅಲ್ಪವಿರಾಮ

(ಸಿ) ಭಾವಸೂಚಕ (ಡಿ) ಆವರಣ

43. 'ಜೇನಿನಂತಹ ಸಿಹಿ' ಇಲ್ಲಿರುವ ಅಲಂಕಾರ

(ಎ) ಉಪಮಾಲಂಕಾರ (ಬಿ) ದೃಷ್ಟಾಂತಾಲಂಕಾರ

(ಸಿ) ರೂಪಕಾಲಂಕಾರ (ಡಿ) ಶ್ಲೇಷಾಲಂಕಾರ

44. 'ಪ್ರಾಣಿ' ಪದದ ಬಹುವಚನರೂಪ

(ಎ) ಪ್ರಾಣಿಗಳು (ಬಿ) ಪ್ರಾಣಿಯರು

(ಸಿ) ಪ್ರಾಣಿಗರು (ಡಿ) ಪ್ರಾಣಿಯಂದಿರು

45. 'ರಕ್ತಗಾಲಿನ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಲೋಪ ಸಂಧಿ (ಬಿ) ಆಗಮ ಸಂಧಿ

(ಸಿ) ಗುಣ ಸಂಧಿ (ಡಿ) ಆದೇಶ ಸಂಧಿ

46. ಮಕ್ಕಳು ಶಾಲೆಗೆ ಬರುತ್ತಾರೆ ಆದರೆ ಪಾಠ ಹೇಳಲು ಅಲ್ಲಿ ಸಾಕಷ್ಟು ಶಿಕ್ಷಕರಿಲ್ಲ. ಈ ವಾಕ್ಯವು

(ಎ) ಸಾಮಾನ್ಯ ವಾಕ್ಯ (ಬಿ) ಮಿಶ್ರ ವಾಕ್ಯ

(ಸಿ) ಸಂಯೋಜಿತ ವಾಕ್ಯ (ಡಿ) ಪ್ರಾಸ ವಾಕ್ಯ

47. ಕೊಡಗಿನ ಪ್ರವಾಹದಲ್ಲಿ ಮನೆಮಠ ಕಳೆದು ಕೊಂಡ ಜನ ಅಲೆಮಾರಿಗಳಾಗಿ ಊರೂರು ಸುತ್ತಿದರು. – ಈ ವಾಕ್ಯದಲ್ಲಿ ಜೋಡುನುಡಿ ಸೂಚಿಸುವ ಪದ

(ಎ) ಊರೂರು (ಬಿ) ಮನೆಮಠ

(ಸಿ) ಅಲೆಮಾರಿಗಳು (ಡಿ) ಕೊಡಗಿನ ಪ್ರವಾಹ

48. ತತ್ಪುರುಷ ಸಮಾಸಕ್ಕೆ ಉದಾಹರಣೆ

(ಎ) ಅರಮನೆ (ಬಿ) ಹೆಬ್ಬಾಗಿಲು

(ಸಿ) ಮುಕ್ಕಣ್ಣು (ಡಿ) ಮುಂಗೈ

49. ಭೂಮಿತಾಯಿ ಮಗನಾದ ರೈತನು ಮೇಜಿನ ಮೇಲೆ ಕುಳಿತು ಕೆಲಸ ಮಾಡಲು ಸಾಧ್ಯವಿಲ್ಲ. ಈ ವಾಕ್ಯದಲ್ಲಿರುವ ಹಿಂದೂಸ್ಥಾನೀ ಪದ

(ಎ) ಭೂಮಿ (ಬಿ) ರೈತ

(ಸಿ) ತಾಯಿ (ಡಿ) ಮೇಜು

50. 'ವರುಷ' ಪದದ ತತ್ಸಮ ರೂಪ

(ಎ) ವರುಶ (ಬಿ) ವರುಸ

(ಸಿ) ವರ್ಷ (ಡಿ) ವರ್ಶ

51. ಕಾಡಿಗೆ ಮತ್ತೆಮತ್ತೆ ಬೆಂಕಿಬಿದ್ದು ಧಗಧಗನೆ ಉರಿದು ಮರಗಳೆಲ್ಲ ನಾಶವಾದವು – ಈ ವಾಕ್ಯದಲ್ಲಿರುವ ಅನುಕರಣಾವ್ಯಯ

(ಎ) ಮತ್ತೆಮತ್ತೆ (ಬಿ) ಬೆಂಕಿಬಿದ್ದು

(ಸಿ) ನಾಶವಾದವು (ಡಿ) ಧಗಧಗನೆ

## ವಿಭಾಗ – 'ಸಿ'
## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

**ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** $4 \times 1 = 4$

'ಮನೆಯೇ ಮೊದಲ ಪಾಠಶಾಲೆ; ಜನನಿತಾನೆ ಮೊದಲ ಗುರುವು ಜನನಿಯಿಂದ ಪಾಠಕಲಿತ ಜನರು ಧನ್ಯರು' ಎಂಬ ಜನಜನಿತ ನುಡಿಯೊಂದಿದೆ. ನಮ್ಮೆಲ್ಲರ ಜನ್ಮದಾತೆ ತಾಯಿ. ನಮ್ಮ ಕುಟುಂಬದ, ಸಮಾಜದ, ಸಂಸ್ಕೃತಿಯ ಕೇಂದ್ರಬಿಂದು ತಾಯಿ. ಪುರುಷನ ಒಡನೆ ಹುಟ್ಟಿ, ಸಹೋದರಿಯಾಗಿ ಬೆಳೆದು ಹುಟ್ಟಿದ ಮನೆ ಮತ್ತು ಮತ್ತೊಂದು ಮನೆ ಬೆಳಗುವ ಸೊಸೆಯಾಗಿ, ಸಂಸಾರದ ನೇಗಿಲಿಗೆ ಹೆಗಲ ನೀಡಿ ದುಡಿದು ದುಡಿದು ಹೈರಾಣಾಗುತ್ತಾಳೆ. ಒಂದು ಸಂಸಾರದ, ಸಮಾಜದ, ಸಂಸ್ಕೃತಿಯ ಉಳಿವಿನ ರೂವಾರಿಯಾಗಿ, ಸಂರಕ್ಷಕಿಯಾಗಿ ತಾಯಿಯ ಸ್ಥಾನ ಬಹುದೊಡ್ಡದು. ಒಂದು ಸಂಸಾರದ ಅಥವಾ ಸಮಾಜದ ಸಂಸ್ಕೃತಿಯ ಉಳಿವು ಅಳಿವಿನ ಶ್ರೇಷ್ಠತೆ, ಕನಿಷ್ಠತೆ ಎಲ್ಲವೂ ತಾಯಿಯನ್ನೇ ಅವಲಂಬಿಸಿದೆ. ಅವಳೇ ನಮ್ಮ ಸಂಸ್ಕೃತಿಯ ಪರಿಪಾಲಕಳು. ಇಡೀ ವಿಶ್ವವನ್ನು ಧ್ವನಿಸುವ ತಾಯಿ, ಶಾಂತಿದಾತೆಯಾಗಿ, ತ್ಯಾಗಮಾತೆಯಾಗಿ, ವಿಶ್ವಮಾತೆಯಾಗಿ ಚೈತನ್ಯದಾತೆಯ ರೂಪದಲ್ಲಿ ನಿಂತಿದ್ದಾಳೆ.

*ಪ್ರಶ್ನೆಗಳು :*

52. ತಾಯಿಯ ಬಗ್ಗೆ ಇರುವ ಜನಜನಿತ ನುಡಿ ಯಾವುದು ?

53. ತಾಯಿ ಯಾವುದರ ಕೇಂದ್ರ ಬಿಂದು ?

54. ತಾಯಿ ನಮ್ಮ ಸಂಸ್ಕೃತಿಯ ಪರಿಪಾಲಕಳೆನಿಸಿದ್ದಾಳೆ ಏಕೆ ?

55. ಇಡೀ ವಿಶ್ವವನ್ನು ಧ್ವನಿಸುವ ತಾಯಿ ಯಾವ ಯಾವ ರೂಪದಲ್ಲಿ ನಿಂತಿದ್ದಾಳೆ ?

56. **ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** 1 × 3 = 3

* ಕೈ ಕೆಸರಾದರೆ ಬಾಯಿ ಮೊಸರು
* ಶಕ್ತಿಗಿಂತ ಯುಕ್ತಿ ಮೇಲು
* ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ

57. ನಿಮ್ಮನ್ನು ಬೆಂಗಳೂರಿನ ವಿಜಯ ಪ್ರೌಢಶಾಲೆಯ 'ಅರವಿಂದ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸುವ ಗಣರಾಜ್ಯೋತ್ಸವ ಸಮಾರಂಭಕ್ಕೆ ಆಹ್ವಾನಿಸಿ ಮಂಗಳೂರಿನಲ್ಲಿರುವ ನಿಮ್ಮ ತಾಯಿಗೆ ಒಂದು ಪತ್ರ ಬರೆಯಿರಿ. 1 × 4 = 4

**ಅಥವಾ**

ನಿಮ್ಮನ್ನು ಬಳ್ಳಾರಿಯ 'ರಜತ್' ಎಂದು ಭಾವಿಸಿಕೊಂಡು, ನಿಮ್ಮ ಊರಿನ ರಸ್ತೆಗಳನ್ನು ರಿಪೇರಿ ಮಾಡಿಸಿಕೊಡುವಂತೆ ಕೋರಿ ಜಿಲ್ಲಾ ಪಂಚಾಯ್ತಿ ಅಧ್ಯಕ್ಷರಿಗೆ ಮನವಿ ಪತ್ರವೊಂದನ್ನು ಬರೆಯಿರಿ.

58. **ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ :** 1 × 4 = 4

* ರಾಷ್ಟ್ರೀಯ ಭಾವೈಕ್ಯತೆ
* ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ
* ಮೊಬೈಲ್ ಬಳಕೆಯ ಉಪಯೋಗ, ದುಷ್ಪರಿಣಾಮ